ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

---

ಸಂ/ಕಂ/ಪಹಣಿ/ವಿವಾದ/22/2015–16 ದಿ.31.3.16

---

ಉಪಸ್ಥಿತರು :– ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

---

| ವಾದಿಗಳು | ಪ್ರತಿವಾದಿಗಳು |
|---|---|
| 1) ಶ್ರೀ ಕೆಂಚನಗೌಡ್ರು ॥ ಕಾನನಗೌಡ<br>ತಂದೆ ನೀಲನಗೌಡ<br>2) ಶ್ರೀ ಕೆ.ಬುಳ್ಳನಗೌಡ ತಂದೆ ದಿ॥ ನೀಲನಗೌಡ<br>ಗ್ರಾಮ ಮೋರಿಗೇರಿ | ಶ್ರೀ ಕೆ.ನಿಂಗನಗೌಡ<br>ತಂದೆ ನೀಲನಗೌಡ<br>ಗ್ರಾಮ ಮೋರಿಗೇರಿ |

---

**ವಿಷಯ :– ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 466/ಎ ಪೂರಾ ವಿಸ್ತೀರ್ಣ 8–00 ಎಕರೆ ಜಮೀನು ಪಾಲುವಿಭಾಗದ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು ವಿಚಾರಣೆ.**

---

ಪೀಠಿಕೆ :–

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 466/ಎ ಪೂರಾ ವಿಸ್ತೀರ್ಣ 8–00 ಎಕರೆ ಜಮೀನನ್ನು ಮೋರಿಗೇರಿ ಗ್ರಾಮವಾಸಿಗರಾದ ವಾದಿಗಳು ಪಾಲುವಿಭಾಗದ ಪ್ರಕಾರ ಹಕ್ಕು ಬದಲಾವಣೆ ಹೊಂದಲು ತಾಲೂಕು ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಇದರನ್ವಯ ಭೂಮಿ ಕೇಂದ್ರದಲ್ಲಿ ಅರ್ಜಿ ದಾಖಲಾಗಿ ವಹಿವಾಟು ಸಂಖ್ಯೆ 403/2014–15 ಹಾಗೂ ಹ.ಬ.ಸಂಖ್ಯೆ ಹೆಚ್.152/2014–15 ರಂತೆ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಗ್ರಾಮಲೆಕ್ಕಾಧಿಕಾರಿ ಮೋರಿಗೇರಿ ಇವರ ದ್ವಾರ ಪ್ರಕರಣಕ್ಕೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಪ್ರತಿವಾದಿಗಳು ತಮ್ಮ ತಕರಾರನ್ನು ಸ್ವೀಕೃತಿ ಸಂಖ್ಯೆ 27/2015–16 ರಂತೆ ದಾಖಲು ಮಾಡಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವು ಈ ಮೇಲಿನ ಸಂಖ್ಯೆಯಂತೆ ದಾಖಲಾಗಿ ದಿನಾಂಕ: 15–10–2015 ರಿಂದ 31–03–2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಕರಣದಲ್ಲಿ ಪ್ರತಿವಾದಿಗಳ ಪರವಾಗಿ ಶ್ರೀ ಬಿ. ಪ್ರಕಾಶ

ವಕಾಲತ್ ವಹಿಸಿಕೊಂಡಿರುತ್ತಾರೆ. ವಾದಿಗಳ ಪರವಾಗಿ ಶ್ರೀ ಕೆ.ಜಗದೀಶ ಇವರು ವಕಾಲತ್ ವಹಿಸಿಕೊಂಡಿರುತ್ತಾರೆ. ಪ್ರತಿವಾದಿಗಳ ಪರವಾಗಿ ನ್ಯಾಯವಾದಿಗಳು ತಮ್ಮ ಲಿಖಿತ ವಾದ ಮಂಡಿಸುತ್ತಾ ಎದುರುದಾರರಾದ ಶ್ರೀ ನಿಂಗನಗೌಡ ಇವರ ಹಿಸ್ಸಕ್ಕೆ 1-00 ಎಕರೆ ಜಮೀನು ಇರುವುದಾಗಿಯೂ ಹಾಗೂ ಅರ್ಜಿದದಾರರ ಅರ್ಜಿಯನ್ನು ವಜಾ ಮಾಡುತ್ತಾ ಎದುರುದಾರರ ಹೆಸರಿನಲ್ಲಿ 1-00 ಎಕರೆಗೆ ಹಕ್ಕು ಬದಲಾವಣೆ ಮಾಡಬೇಕೆಂದು ವಾದ ಮಂಡಿಸಿರುತ್ತಾರೆ. ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಾದಿಗಳು ಸಲ್ಲಿಸಿರುವ ಪಾಲುವಿಭಾಗದ ಪತ್ರದಲ್ಲಿ ವಿವಾದಿತ ಜಮೀನಿನ ವಿವರವು ಸರಿಯಾಗಿಲ್ಲದಿರುವುದು ಕಂಡು ಬರುತ್ತದೆ. ಹಾಗೂ ಪಾಲು ವಿಭಾಗದ ವಿಸ್ತೀರ್ಣಕ್ಕೂ ದಾಖಲಾದ ಅರ್ಜಿಯ ವಿಸ್ತೀರ್ಣಕ್ಕೂ ತಾಳೆ ಹೊಂದುತ್ತಿಲ್ಲ. ಹಾಗೂ ಪಾಲು ವಿಭಾಗಗಳು ಸನ್ 04-05-1980 ರಲ್ಲಿ ಹಾಗೂ 10-11-2008 ರಲ್ಲಿ ಮಾಡಿಕೊಂಡ ಎರಡು ಪಾಲುವಿಭಾಗಗಳನ್ನು ಸಲ್ಲಿಸಿದ್ದು ಗೊಂದಲಕ್ಕೆ ಎಡೆಮಾಡಿ ಕೊಟ್ಟಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಾದಿ ಪ್ರತಿವಾದಿಗಳು ಯಾವುದೇ ಲಿಖಿತ ಹೇಳಿಕೆ ನೀಡಿರುವುದಿಲ್ಲ. ಪ್ರಕರಣವು ಈ ಮೇಲಿನ ಅಂಶಗಳ ಪ್ರಕಾರ ಸಿವಿಲ್ ಪ್ರಕರಣಕ್ಕೆ ಸಂಬಂಧಿಸಿರುವುದು ಕಂಡು ಬರುತ್ತದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 466/ಎ ವಿಸ್ತೀರ್ಣ 8-00 ಎಕರೆ ಜಮೀನಿನ ಹಕ್ಕು ಬದಲಾವಣೆ ಕುರಿತು ವಾದಿ ಪ್ರತಿವಾದಿಗಳು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಲು ನಿರ್ದೇಶಿಸುತ್ತಾ ಸದರಿ ಅರ್ಜಿಯನ್ನು ಗೈರು ಮಂಜೂರು ಮಾಡಿ ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ